ಮೂಲ ದಾವೆ ನಂ.07/2024

ಪಿ.ಡಬ್ಲ್ಯೂ.01

ದಿನಾಂಕಃ 26-10-2024.
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
<u>ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದ ಃ</u>

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ದಿಃ 08-02-2019 ರ ನೊಂದಾಯಿತ ಖರೀದಿ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು, ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ನಿ.ಪಿ.1 ಕ್ಕೆ ನಾನು, ಶಾಂತಪ್ಪ, ತಿಪ್ಪಣ್ಣ, ಲಕ್ಷ್ಮಣ, ಯಂಕಪ್ಪ, ಶಿವಕುಮಾರ, ಪದ್ಮಾವತಿ ಇವರುಗಳು ಸಹಿ ಹಾಕಿರುತ್ತೇವೆ. ಪ್ರತಿವಾದಿ ಶಾಂತಪ್ಪ ಇವರೂ ಸಹ ನಿಪಿ.1 ಕ್ಕೆ ಸಹಿ ಹಾಕಿರುತ್ತಾರೆ. ದಾವಾ ಆಸ್ತಿಯ 3 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ. 2 ರಿಂದ 4 ಎಂದು ಗುರುತಿಸಲಾಂತು. ಲೀಗಲ್ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ.5 ಎಂದು, ಸದರಿ ನೋಟಿಸ್ ಪ್ರತಿವಾದಿಗೆ ಜಾರಿಯಾದ ಬಗ್ಗೆ ಅಂಚೆ ಇಲಾಖೆಯವರು ನೀಡಿರುವ ಹಿಂಬರಹ ದಾಖಲೆಯನ್ನು ನಿಪಿ.6 ರಿಂದ 8 ಎಂದು ಗುರುತಿಸಲಾಯಿತು. ಅಂಚೆ ರಶೀದಿ ನಿಪಿ.9 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಈ ಹಂತದಲ್ಲಿ ಪ್ರತಿವಾದಿಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಮಯಾವಕಾಶವನ್ನು ಕೋರಿದ್ದು ಸಮಾವಕಾಶವನ್ನು ನೀಡಲಾಯಿತು</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾದಂ. ಶಹಾಪೂರ.